ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 978

ಸದಸ್ಯರ ಹೆಸರು : ಶ್ರೀ ಎಂ.ಎಲ್. ಅನಿಲ್ ಕುಮಾರ್

ಉತ್ತರಿಸಬೇಕಾದ ದಿನಾಂಕ: : 24-02-2022

ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಚಿವಾಲಯದ ಇಲಾಖೆಗಳಲ್ಲಿ ಕಡತಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿಲ್ಲ. |
| ಆ | ಕಡತ ವಿಲೇವಾರಿಗೆ ಇಂತಿಷ್ಟು ಅವಧಿ ಎಂದು ಕಾಲ ನಿಗದಿಪಡಿಸಲಾಗಿದೆಯೆ; ವಿಷಯ ನಿರ್ವಾಹಕರಿಂದ ಕಾರ್ಯದರ್ಶಿಗಳ ಮಟ್ಟದವರೆಗೆ ಎಷ್ಟೆಷ್ಟು ಅವಧಿಯಲ್ಲಿ ಕಡತ ವಿಲೇವಾರಿ ಮಾಡಬೇಕು ಎಂಬ ಬಗ್ಗೆ ನಿಯಮಾವಳಿ ರಚಿಸಲಾಗಿದೆಯೇ; (ವಿವರ ನೀಡುವುದು) | ಸಚಿವಾಲಯದ ಕೈಪಿಡಿ ಅನ್ವಯ ವಿಷಯ ನಿರ್ವಾಹಕರಿಂದ ಕಾರ್ಯದರ್ಶಿಯವರ ವರೆಗಿನ ಹಂತಗಳಲ್ಲಿ ಪ್ರತಿಯೊಬ್ಬರೂ ಮೂರು ದಿನಗಳ ಅವಧಿಯಲ್ಲಿ ಕಡತವಿಲೇವಾರಿ ಮಾಡಬೇಕಾಗಿರುತ್ತದೆ. |
| ಇ | ಆಯಾ ಇಲಾಖೆಗಳಲ್ಲಿನ ಕಡತ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಪರಿಶೀಲಿಸಲು ಯಾವ ವ್ಯವಸ್ಥೆ ಇದೆ; ತನಿಖೆ ಮಾಡಿ ಆಡಳಿತದಲ್ಲಿ ಸುಧಾರಣೆ ತರಲು ನಿಯೋಜಿಸಲಾಗಿರುವ ಅಧಿಕಾರಿಗಳು ಯಾರು; ಅವರು ಯಾವ ರೀತಿ ಕ್ರಮ ಕೈಗೊಂಡಿದ್ದಾರೆ. | ಕಡತ ವಿಲೇವಾರಿ ಸಮರ್ಪಕವಾಗಿ ಆಗುತ್ತಿರುವ ಕುರಿತು ಆಯಾ ಇಲಾಖೆಯ ಕಾರ್ಯದರ್ಶಿಯವರಯ ಕಾಲ ಕಾಲಕ್ಕೆ ಸಭೆಯನ್ನು ನಡೆಸಿ ಪರಿಶಿಲಿಸುತ್ತಾರೆ ಹಾಗೂ ಎಲ್ಲಾ ಕಾರ್ಯದರ್ಶಿಗಳ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಯವರು ಪರಿಶೀಲಿಸುತ್ತಾರೆ. |
| ಈ | ಕಡತಗಳ ಶೀಘ್ರ ವಿಲೇವಾರಿಗೆ ಮತ್ತು ಆಡಳಿತದಲ್ಲಿ ಚುರುಕು ತಂದು ಆಡಳಿತ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ? | ಈ ಮುಂಚೆ ಕಡತವನ್ನು ವಿಲೇವಾರಿ ಮಾಡಲು ಪ್ರತಿ ಹಂತದಲ್ಲಿ ಐದು ದಿನಗಳನ್ನು ನಿಗದಿ ಪಡಿಸಿದ್ದು ಈಗ ಮೂರು ದಿನಗಳ ಒಳಗಾಗಿ ವಿಲೇ ಮಾಡಬೇಕಾಗಿರುತ್ತದೆ. ಅಲ್ಲದೆ, ಪ್ರತಿ ಮಾಹೆ ಮುಖ್ಯಕಾರ್ಯದರ್ಶಿಯವರು ಪರಿಶೀಲಿಸುತ್ತಿದ್ದು, ಕಡತಗಳ ಶೀಘ್ರ ವಿಲೇವಾರಿಗೆ ಸುತ್ತೋಲೆಗಳನ್ನು ಹೊರಡಿಸಿ, ಅವುಗಳನ್ನು ಪಾಲಿಸುವ ಮೂಲಕ ಆಡಳಿತದಲ್ಲಿ ಚುರುಕು ತರಲಾಗುತ್ತಿದೆ. |

ಸಿಆಸುಇ(ಆಸು) 30 ಕತವ 2022

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ